ಶೋಷಣೆ ಮಾಡತಕ್ಕಂಥ ರೀತಿಯಲ್ಲಿ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದನ್ನು ನಾವು ಸ್ವಲ್ಪ ಕಠಿಣವಾಗಿ ನಿಲ್ಲಿಸಬೇಕು. ಬರಿ ಕಠಿಣವಾಗಿದ್ದರೆ ಸಾಲದು, ಉಪಾಯವಾಗಿ ಇದರ ಬೇರನ್ನೂ ಕಿತ್ತು ಬಿಸಾಡಬೇಕು. ಇದರ ಬೇರಿನ ತುದಿಯನ್ನು ಚಿವುಟಿದರೆ ಅಥವಾ ಗೆಲ್ಲನ್ನು ತೆಗೆದರೆ ಆಗುವುದಿಲ್ಲ. ಕೆಲವೊಮ್ಮೆ ಬೇರನ್ನೇ ಕಿತ್ತು ಬಿಸಾಡಬೇಕಾಗುತ್ತದೆ. ಏಕೆಂದರೆ ಈ ಬೇರು ಅಷ್ಟು ಆಳವಾಗಿದೆ. ಬೇರನ್ನು ತೆಗೆದು ಬಿಸಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ನಾವು ಈಗ ಒಂದು ಪ್ರಯತ್ನ ಮಾಡುತ್ತಿದ್ದೇವೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದು ಆ ಕೆಂಪು ಕಟ್ಟಡಕ್ಕೆ ಕೂಡ ಹೊಂದಿಕೊಂಡಿರುತ್ತದೆ.

ಉಪಾಧ್ಯಕ್ಷರು :- ಲಿಖಿತ ದೂರನ್ನು ಕೊಟ್ಟರೆ ...

ಶ್ರೀ ಎಂ. ವೀರಪ್ಪ ಮೊಯಿಲಿ :- ಲಿಖಿತ ದೂರು ಬಂದಿಲ್ಲವೆಂದು ನಾವು ಸುಲಭವಾಗಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಹುದು. ಪಾಪಾ ; ಪೇರೆಂಟ್ಸ್ ದೂರು ಕೊಡಬೇಕು. ಆದರೆ ಅವರ ಮಕ್ಕಳು ಅಲ್ಲಿ ಕಲಿಯಬೇಕಾಗುತ್ತದೆ. ಇದು, ನಾವು ನಿರೀಕ್ಷೆ ಮಾಡುವುದಕ್ಕೂ ಆಗುವುದಿಲ್ಲ. ನಮ್ಮ ಸರ್ಕಾರದ ಜವಾಬ್ದಾರಿಯನ್ನು ತಪ್ಪಿಸುವುದಕ್ಕೆ ಈ ರೀತಿಯ ಉತ್ತರ ಕೊಡುತ್ತೇವೆ, ಇದು ಒಂದು ರೀತಿಯ ಆಶಾಡಭೂತಿತನ. ಈ ಕೆಲಸ ನಾನು ಕೂಡ ಮಾಡುತ್ತೇನೆ. ಸರಿಯಾದ ಮಾರ್ಗ ಹುಡುಕಬೇಕಾದರೆ, ನಾವು ಈಗಾಗಲೇ ಡ್ರಾಫ್ಟ್ಸ್ ರೂಲ್ಸ್ ತಯಾರು ಮಾಡಿದ್ದೇವೆ. ನಾವು, ಶಿಕ್ಷಣ ಇಲಾಖೆಯವರು ಬಹಳ ಆಲೋಚನೆ ಮಾಡಿ, ತಯಾರು ಮಾಡಿದ್ದೇವೆ. ಸಂಬಂಧಪಟ್ಟ ಉಚ್ಚ ನ್ಯಾಯಾಲಯಗಳ ನಿರ್ಣಯಗಳು, ನಮಗೆ ಬಂದಂಥ ಎಲ್ಲಾ ಅನುಭವಗಳು ಇವುಗಳೆಲ್ಲವನ್ನೂ ಕ್ರೋಡೀಕರಿಸಿ, ಭಟ್ಟಿ ಇಳಿಸಿ, ಒಂದು ಡ್ರಾಫ್ಟ್ಸ್ ರೂಲ್ಸ್ ತಯಾರು ಮಾಡಿದ್ದೇವೆ. ಈ ಕ್ಯಾಪಿಟೇಷನ್ ಅಬಾಲಿಷನ್ ಆಕ್ಟ್ ಒಳಗಡೆ ಈಗಾಗಲೇ ಒಂದು ಡ್ರಾಫ್ಟ್ ರೂಲ್ಸ್ ತಯಾರು ಮಾಡಿದ್ದೇವೆ. ತಯಾರು ಮಾಡಿ, ಈಗಾಗಲೇ ಕಾನೂನು ಇಲಾಖೆಗೆ ಕಳುಹಿಸಿದ್ದೇವೆ. Within a couple of days, ಈ ಅಧಿವೇಶನ ಇರುವಾಗಲೇ ಇದನ್ನು ಫೈನಲೈಸ್ ಮಾಡುತ್ತೇವೆ, ನೋಟಿಫೈ ಮಾಡಬೇಕೆಂದು ಹೇಳಿದ್ದೇವೆ. ತಾವು ಕೂಡ, ಯಾರಾದರೂ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಸುವಂತಿದ್ದರೆ, I would like to call a meeting of the Hon. Members of this House and that House who are interested in this ಇಬ್ಬರನ್ನೂ ಕರೆದು ಇದಕ್ಕೆ ಅಂತಿಮ ಸ್ವರೂಪ ಕೊಡಬೇಕು. ಈ ಅಧಿವೇಶನ ಮುಗಿಯುವ ಮೊದಲು ಇದಕ್ಕೆ ಅಂತಿಮ ಸ್ವರೂಪ ಕೊಡಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ. ಈಗಾಗಲೇ ಸಂಬಂಧಪಟ್ಟ ಕಾನೂನು ಇಲಾಖೆ, ಆರೋಗ್ಯ ಇಲಾಖೆ ಮತ್ತು ನಮ್ಮ ಇಲಾಖೆಯವರೆಲ್ಲರೂ ಸೇರಿ ಒಂದು ರೂಪ ಕೊಟ್ಟಿದ್ದೇವೆ. ಇದಕ್ಕೆ ಅಂತಿಮ ಸ್ವರೂಪ ಕೊಡುವ ಮೊದಲು, ಪುನಃ ತಮ್ಮ ಜೊತೆಯಲ್ಲೂ ಮಾತನಾಡಿ, ಮುಂದೆ ಬರತಕ್ಕ ಅಕಾಡೆಮಿಕ್ ವರ್ಷ ಏನಿದೆ, ಅಲ್ಲಿ ಎಲ್.ಕೆ.ಜಿ.ಯಿಂದ ಹಿಡಿದು ಉನ್ನತ ವಿದ್ಯಾಭ್ಯಾಸದವರೆಗೆ, ಇದನ್ನು ಹತೋಟಿಗೆ ತರತಕ್ಕಂಥ, ಮುಖ್ಯವಾಗಿ ಬುಡಸಹಿತ, ಈ ಪಿಡುಗನ್ನು ಹೋಗಲಾಡಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಎಂ. ಮುನಿಸ್ವಾಮಿ :- ತಾವು ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಇದು ಯಾವುದೇ ರಾಜ್ಯಸರ್ಕಾರಕ್ಕೂ ಹತೋಟಿ ಇಲ್ಲದಿರುವ ಕಾರಣ ಈ ರೀತಿ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು

2. ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ, 1992.

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, 1992ನೇ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು

ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯ್ತಿ ಸಮಿತಿಗಳು, ಮಂಡಲ ಪಂಚಾಯ್ತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, 1992 ರ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯ್ತಿ ಸಮಿತಿಗಳು, ಮಂಡಲ ಪಂಚಾಯ್ತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - I

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992
(1992ರ ವಿಧಾನಸಭಾ ವಿಧೇಯಕ, ಸಂಖ್ಯೆ - 4)

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ 20)ನ್ನು ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತೊಮ್ಮನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. **ಚಿಕ್ಕ ಹೆಸರು ಮತ್ತು ಪ್ರಾರಂಭ** :- ಈ ಅಧಿನಿಯಮವನ್ನು ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

   2. ಇದು 1992ನೇ ಜನವರಿ ಎಂಟನೇ ದಿನಾಂಕದಿಂದ ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು.

2. **8ನೇ ಪ್ರಕರಣದ ತಿದ್ದುಪಡಿ** :- ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 (1985 ರ ಕರ್ನಾಟಕ ಅಧಿನಿಯಮ 20) (ಇದರಲ್ಲಿ ಇನ್ನು ಮುಂದೆ ಮೂಲ